**ದಿನಾಂಕ : *14-02-2025* ರಂದು ಸಾಕ್ಷಿಗೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**
**ಮುಂದು ವರೆದ ಮುಖ್ಯ ವಿಚಾರಣೆಃ ಶ್ರೀ. ಎನ್.ಎಲ್.ಟಿ ವಕೀಲರಿಂದ, ಅರ್ಜಿದಾರರ ಪರವಾಗಿ:**

ನಾನು ಈ ಕೆಳಕಂಡ ದಾಖಲೆಗಳನ್ನು ಗುರುತಿಸುತ್ತೇನೆ.

ನಿಪಿ-4 ಃ ಪ್ರ.ವ. ವರದಿಯ ದೃಢೀಕೃತ ಪ್ರತಿ

ನಿಪಿ-5 ಃ ದೂರಿನ ದೃಢೀಕೃತ ಪ್ರತಿ

ನಿಪಿ-6 ಃ ಅಂತಿಮ ವರದಿಯ ದೃಢೀಕೃತ ಪ್ರತಿ

ನಿಪಿ-7 ಃ Police information letter ಇದರ ದೃಢಿಕೃತ ಪ್ರತಿ

ನಿಪಿ-8 ಃ ಅಪರಾಧ ವಿವರದ ದೃಢೀಕೃತ ಪ್ರತಿ

ನಿಪಿ-9 ಃ ವಾಹನ ತಡೆ ಪಂಚನಾಮೆಯ ದೃಢೀಕೃತ ಪ್ರತಿ

ನಿಪಿ-10 ರಿಂದ ನಿಪಿ-12 ಃ ಸಾಕ್ಷಿದಾರರ ಹೇಳಿಕೆಗಳ ದೃಢೀಕೃತ ಪ್ರತಿಗಳು.

ನಿಪಿ-13 ಃ ಗಾಯದ ಪ್ರಮಾಣ ಪತ್ರದ ದೃಢೀಕೃತ ಪ್ರತಿ

ನಿಪಿ-14 ಃ ಎಮ್.ವಿ ವರದಿಯ ದೃಢೀಕೃತ ಪ್ರತಿ

ಅರ್ಜಿಯಲ್ಲಿ ಕೋರಿರುವಂತೆ ಆದೇಶ ಮಾಡಬೇಕೆಂದು ಕೋರುತ್ತೇನೆ.

**ಪಾಟೀ ಸವಾಲು ಃ 2 ನೇ ಎದುರುದಾರರ ಪರ ಶ್ರೀ ಎಮ್ ಎಸ್ ಹೆಚ್**

ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರಕ್ಕೆ ನಾನು ಮಾಹಿತಿ ನೀಡಿರುತ್ತೇನೆ. ದಿನಾಂಕ 02-06-2022 ಅಪಘಾತವು ಸಂಭವಿಸಿರುತ್ತದೆ. ನಾನು ಟಾಟಾ ಎಸ್ ನಂ. ಕೆಎ-29 ಎ 3763 ವಾಹನದಲ್ಲಿ ಹೊರಟಿದ್ದೆ. ನಾನು ಕಮತಗಿಯಿಂದ ಬಾಗಲಕೋಟೆಗೆ ಹೊರಟಿದ್ದೇನು ಮತ್ತು ನನ್ನ ಜೊತೆ ಒಬ್ಬ ಮಹಿಳೆ ಇದ್ದರು. ಸದರಿ ವಾಹನಕ್ಕೆ ಇನ್ಸೂರನ್ಸ ತುಂಬುವುದು ಬಾಕಿ ಇತ್ತು ಮತ್ತು ಡಿ ಎಲ್ ಇರುತ್ತದೆ. ಡಿ ಎಲ್ ನ್ನು ಮಾನ್ಯ ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ. ನಾನು ಕಮತಗಿ ಬಿಟ್ಟಾಗ ಬೆಳಿಗ್ಗೆ 3.30 ಗಂಟೆಯಿಂದ 4 ಗಂಟೆಯಾಗಿತ್ತು. ನನ್ನ ವಾಹನ ಗೂಡ್ಸ ವಾಹನ ಆಗಿದ್ದು ಅದರಲ್ಲಿ ಮತ್ತೊಬ್ಬ ಪ್ರಯಾಣಿಕರನ್ನು ಹತ್ತಿಸಿಕೊಳ್ಳಲು ಪರವಾನಿಗೆ ಇರುವುದಿಲ್ಲ ಎಂದರೆ ಸರಿ. ಅಪಘಾತದ ಜಾಗೆಗೆ ಹೋದಾಗ ಬೆಳಿಗ್ಗೆ 4.30 ಗಂಟೆಯಾಗಿತ್ತು. ನಾನು ನಿಂತ ವಾಹನಕ್ಕೆ ಅಪಘಾತ ಪಡಿಸಿರುತ್ತೀನಿ ಎಂದರೆ ಸಾಕ್ಷಿದಾರರು ನಿಂತಿದ್ದ ವಾಹನಕ್ಕೆ ಪಾರ್ಕಿಂಗ್ ಲೈಟ ಇರಲಿಲ್ಲ ಮತ್ತು ಸ್ಟಿಕರ್ ಇರಲಿಲ್ಲ ಎಂದು ಹೇಳುತ್ತಾರೆ. ನಿಂತ ವಾಹನವು ರಸ್ತೆಯ ಎಡೆ ಭಾಗದಲ್ಲಿ ನಿಂತಿತ್ತು. ನಾನು ಹಾಜರು ಪಡಿಸಿದ ಹಾತ ನಕಾಶೆಯಲ್ಲಿ ವಾಹನವು ಎಡಗಡೆ ಭಾಗದಲ್ಲಿ ನಿಂತಿತ್ತು ಎಂದರೆ ಸಾಕ್ಷಿದಾರರು ನನ್ನ ಎಡಗಣ್ಣು

ಸರಿಯಾಗಿ ಕಾಣುವುದಿಲ್ಲ ಎಂದು ಹೇಳುತ್ತಾರೆ. ನನಗೆ ಮೊದಲಿನಿಂದ ಕಣ್ಣು ಕಾಣುತ್ತಿರಲಿಲ್ಲ ಎಂದರೆ ಸರಿಯಲ್ಲ. ನಿಂತವಾಹನವು ಇಂಡಿಕೇಟರನ್ನು ಹಾಕಿತ್ತು ಎಂದರೆ ಸರಿಯಲ್ಲ. ನಿಂತ ವಾಹನದ ಬಲಗಡೆಯಿಂದ ನಾವು ನಮ್ಮ ವಾಹನವನ್ನು ಆರಾಮವಾಗಿ ಪಾಸ ಮಾಡಬಹುದಾಗಿತ್ತು ಎಂದರೆ ಸಾಕ್ಷಿದಾರರು ಎದುರುಗಡೆಯಿಂದ ಬರುವ ವಾಹನವು ಲೈಟ ಕೊಟ್ಟಿದ್ದರಿಂದ ನಾನು ಎಡಗಡೆ ತೆಗೆದುಕೊಂಡಿರುತ್ತೇನೆ ಎಂದು ಹೇಳುತ್ತಾರೆ. ಎದರುಗಡಯಿಂದ ಬರುವ ವಾಹನವು ಲೈಟ ಕೊಟ್ಟಿದ್ದರಿಂದ ನಾನು ನಿಧಾನವಾಗಿ ಚಲಿಸಬಹುದಾಗಿತ್ತು ಎಂದರೆ ಸಾಕ್ಷಿದಾರರು ನಿಂತ ವಾಹನವು ಹೋಗುತ್ತಿತ್ತು ಎಂದು ತಿಳಿದಿದ್ದೆ ಎಂದು ಹೇಳುತ್ತಾರೆ. ದೂರನ್ನು ನನ್ನ ಹೆಂಡತಿ ಪ್ರೇಮಾ ನೀಡಿರುತ್ತಾರೆ. ದೂರಿನಲ್ಲಿ ನನ್ನ ತಪ್ಪಿನಿಂದ ಅಪಘಾತ ಆಗಿದೆ ಎಂದು ನಮೂದಿಸಿರುತ್ತಾರೆ ಎಂದರೆ ಸರಿಯಲ್ಲ. ದೂರಿನಲ್ಲಿ ಎದುರುಗಡೆಯಿಂದ ಒಂದು ವಾಹನವು ಬರುತ್ತಿತ್ತು ಎಂದು ನಮೂದಿಸಿರುವುದಿಲ್ಲ ಎಂದರೆ ಸಾಕ್ಷಿದಾರರು ಅಪಘಾತವಾದಾಗ ನನಗ ಪ್ರಜ್ಞೆ ಇರಲಿಲ್ಲ, ದೂರು ಏನು ಕೊಟ್ಟಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲಎಂದು ಹೇಳುತ್ತಾರೆ. ಸಿ ಸಿ ಪ್ರಕರಣದಲ್ಲಿ ನಾನು 1 ನೇ ಆರೋಪಿ ಇರುತ್ತೇನೆ ಎಂದರೆ ಸರಿ. ಅಪಘಾತವಾದಾಗ ನನಗೆ ಏನಾಗಿತ್ತು ಎಂದು ತಿಳಿಯಲಿಲ್ಲ. ಅಪಘಾತವಾದ 2 ರಿಂದ 3 ದಿನಗಳ ನಂತರ ಪ್ರಜ್ಞೆ ಬಂದಿರುತ್ತದೆ. ಪ್ರಜ್ಞೆ ಬಂದಾಗ ನಾನು ರಕ್ತ ವಾಂತಿ ಮಾಡುತ್ತಿದ್ದೆ ಮತ್ತು ಒದ್ದಾಡುತ್ತಿದ್ದೆ. ನನ್ನ ಎಡಗಡೆ ಭಾಗದ ಮುಖದಲ್ಲಿ ಮತ್ತು ಎಡಭಾಗದ ದವಡೆಯಲ್ಲಿ ಆಪರೇಷನ ಮಾಡಿರುತ್ತಾರೆ. ನಾನು ಸಲ್ಲಿಸಿದ ವೈದ್ಯಕೀಯ ಬಿಲ್ಲುಗಳು ಖೊಟ್ಟಿಯಾಗಿರುತ್ತವೆ ಎಂದರೆ ಸರಿಯಲ್ಲ. ನಾನು ನಿನ್ನೆಯ ದಿನ ವೈದ್ಯರ ಹತ್ತಿರ ಹೋಗಿ ತೋರಿಸಿಕೊಂಡು ಬಂದಿರುತ್ತೇನೆ. ನಾನು 14 ರಿಂದ 15 ದಿನಗಳ ಕಾಲ ಒಳರೋಗಿಯಾಗಿ ದಾಖಲಾಗಿದ್ದೆ. ನಾನು ಈಗ ವ್ಯಾಪಾರ ಮಾಡುತ್ತೇನೆ ಎಂದರೆ ಸಾಕ್ಷಿದಾರರು ಮಾಡಲಾಗುವುದಿಲ್ಲ ಎಂದು ಹೇಳುತ್ತಾರೆ. ನಾನು ತಿಂಗಳಿಗೆ 25 ಸಾವಿರ ರೂ. ಗಳನ್ನು ದುಡಿಯುತ್ತೇನೆ ಎಂದು ತೋರಿಸಲು ದಾಖಲೆಗಳನ್ನು ಹಾಜರ ಪಡಿಸಿರುವುದಿಲ್ಲ. ನನಗೆ 45 ರಿಂದ 50 ವರ್ಷ ವಯಸ್ಸು ಇರಬಹುದು ಎಂದರೆ ಸಾಕ್ಷಿದಾರರು ನನಗೆ 38 ರಿಂದ 39 ವರ್ಷ ವಯಸ್ಸು ಎಂದು ಹೇಳುತ್ತಾರೆ. ನನಗೆ 38 ವರ್ಷ ಎಂದು ತೋರಿಸಲು ಆಧಾರ ಕಾರ್ಡನ್ನು ಹಾಜರು ಪಡಿಸಿರುತ್ತೇನೆ. ನನ್ನ ವಾಹನಕ್ಕೆ ವಿಮೆ ಇರದೇ ಇರುವುದರಿಂದ ಮತ್ತು ನನ್ನ ತಪ್ಪಿನಿಂದ ಅಪಘಾತವು ಆಗಿರುತ್ತದೆ ಎಂದರೆ ಸರಿಯಲ್ಲ. ನಾನು ಪರಿಹಾರದ ಹಣಕ್ಕೋಸ್ಕರ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು 1 ನೇ ಆರೋಪಿ ಆಗಿರುವುದರಿಂದ ಅಂತಿಮ ವರದಿಯನ್ನು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಪ್ರಶ್ನೆ

ಮಾಡಿದ್ದೀರಾ ಎಂದರೆ ಸಾಕ್ಷಿದಾರರು ಚಾಲೆಂಜ ಮಾಡಿರುವುದಿಲ್ಲ ಎಂದು ಹೇಳುತ್ತಾರೆ.

**ಮರು ವಿಚಾರಣೆ ಇಲ್ಲ.**

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿದೆ )

ಓ. ಹೇ. ಕೇ. ಸರಿ ಅದೆ.

ಹಿರಿಯ ದಿವಾಣಿ ನ್ಯಾಯಾಧೀಶರು,
ಹಾಗೂ ಜೆ.ಎಮ್.ಎಫ್.ಸಿ, ಹುನಗುಂದ.

HANAMANTARAO R KULKARNI
Digitally signed by HANAMANTARAO R KULKARNI
Date: 2025.02.15 17:38:50 +0530